ESI.A.No.111/2022

AW-1,

ದಿನಾಂಕಃ 08-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. ABN ವಕೀಲರಿಂದ

ಮಾರ್ಚ್ 2014 ರಿಂದ ನಮ್ಮ ಸಂಸ್ಥೆಗೆ ಇ ಎಸ್ ಐ ಕಾನೂನು ಅನ್ವಯಿಸುತ್ತದೆ ಎಂದರೆ ನಿಜ. ಆವಾಗ ನಮ್ಮ ಸಂಸ್ಥೆಯಲ್ಲಿ 14 ಜನ ಕಾರ್ಮಿಕರು ಇದ್ದರು ಎಂದರೆ ನಿಜ. 2016 ರಿಂದ 2018 ರವರೆಗೆ ನಾವು ಇ ಎಸ್ ಐ ವಂತಿಗೆಯನ್ನು ಕಟ್ಟಿಲ್ಲ ಎಂದು ನೋಟೀಸ್ ನೀಡಿದರು ಎಂದರೆ ನಿಜ. ಆ ನೋಟೀಸಿನಲ್ಲಿ ರೂ.1,76,319-00 ಗಳನ್ನು ಯಾಕೆ ಸಂಗ್ರಹಿಸಬಾರದು ಎಂದು ತಿಳಿಸಿದ್ದರು ಎಂದರೆ ನಿಜ. ಆ ನೋಟೀಸ್ ಪಡೆದು ವಿ.ಕೃಷ್ಣೇಗೌಡ ಎಂಬುವರು ನಮ್ಮ ಪರವಾಗಿ ಹಾಜರಾಗಿದ್ದರು ಎಂದರೆ ನಿಜ. ಅವರು ನಮಗೆ ದಾಖಲೆಗಳನ್ನು ಹಾಜರುಪಡಿಸಲು ಅವಕಾಶ ಕೊಡಿ ಎಂದು ಕೇಳಿಕೊಂಡರು ಎಂದರೆ ನಿಜ. ಆನಂತರ ಯಾವುದೇ ದಾಖಲೆಗಳನ್ನು ಎದುರುದಾರರ ಮುಂದೆ ಹಾಜರುಪಡಿಸಲಿಲ್ಲ ಎಂಬುದು ನಿಜ. ಆದ್ದರಿಂದ ರೂ.1,76,319-00 ಗಳನ್ನು ಪಾವತಿಸಬೇಕೆಂದು ಆದೇಶ ಮಾಡಿದರು ಎಂಬುದು ನಿಜ. ಸದರಿ ಆದೇಶದ ವಿರುದ್ಧ ನಾನು ಮೇಲ್ಮನವಿಯನ್ನು ಸಲ್ಲಿಸಿಲ್ಲ ಎಂದರೆ ನಿಜ. ಈ ಕೇಸನ್ನು ದಾಖಲಿಸುವ ಮುಂಚೆ ಇ ಎಸ್ ಐ ಅಧಿಕಾರಿಗಳ ಮುಂದೆ ಎಷ್ಟು ಜನ ಕಾರ್ಮಿಕರು ಇದ್ದಾರೋ ಅವರ ಬಗ್ಗೆ ವಂತಿಗೆಯನ್ನು ಪಾವತಿಸಲು ತಯಾರಿದ್ದೇನೆ ಎಂದು ಹೇಳಿಲ್ಲ ಎಂದರೆ ನಿಜ. ನಾನು ಹಾಜರುಪಡಿಸಿರುವ ಪೇಮೆಂಟ್ ರಿಜಿಸ್ಟರಿನಲ್ಲಿ ನೌಕರರ ಸಹಿ ಇಲ್ಲ ಎಂದರೆ ನಿಜ. 5 ಜನ ಕೆಲಸಗಾರರು ಇದ್ದರು ಎಂದು ನಾನು ಹೇಳುತ್ತಿರುವುದೆಲ್ಲಾ ಸುಳ್ಳು ಈ ಕೇಸಿಗಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇರೀತಿಯಲ್ಲಿ ಅಟೆಂಡೆನ್ಸ ರಿಜಿಸ್ಟರನ್ನು ಈ ಕೇಸಿಗೋಸ್ಕರ ಸೃಷ್ಟಿಸಿ ಹಾಜರುಮಾಡಿದ್ದೇನೆ ಎಂದರೆ ಸರಿಯುಲ್ಲ. ಡಿಫಾಲ್ಟ್ ಅವಧಿಗೆ ಸಂಬಂಧಿಸಿದ ಪ್ರಾಫಿಟ್ ಅಂಡ್ ಲಾಸ್ ಅಕೌಂಟ್ ಮತ್ತು ಬ್ಯಾಲೆನ್ಸ ಶೀಟನ್ನು ಹಾಜರುಪಡಿಸುತ್ತೇನೆ. ನನ್ನ ಬಳಿ 12 ಕಾರ್ಮಿಕರು ಇದ್ದರೂ ಕೂಡ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಲಸಗಾರರಿಗೆ ಸಂಬಳ ಕೊಟ್ಟ ಅವಧಿಯಲ್ಲಿ ಇ ಎಸ್ ಐ ವಂತಿಗೆಯನ್ನು ಕಟಾಯಿಸಿದ್ದೇನೆ ಎಂದರೆ ನಿಜ. ಆರೀತಿ ಕಟಾಯಿಸಿದ ಹಣವನ್ನು ಇ ಎಸ್ ಐ ಸಂಸ್ಥೆಗೆ ನಾನು ಪಾವತಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿರುವ 5 ಜನ ಕೆಲಸಗಾರರ ಇ ಎಸ್ ಐ ವಂತಿಗೆಯನ್ನು ಕೂಡ ಸರಿಯಾದ ಸಮಯದಲ್ಲಿ ಪಾವತಿಸಿಲ್ಲ ಎಂದರೆ ಕೆಲವರದನ್ನು ಕಟ್ಟಿದ್ದೇನೆ ಕೆಲದವರನ್ನು ಆಮೇಲೆ ಕಟ್ಟಿದ್ದೇನೆ ಎಂದು ನುಡಿಯುತ್ತಾರೆ. ಆರೀತಿ ಕಟ್ಟಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ಪ್ರಯತ್ನ ಮಾಡುತ್ತೇನೆ. ಎದುರುದಾರರು ಆದೇಶ ಮಾಡಿರುವಂತೆ ವಂತಿಗೆಯನ್ನು ಪಾವತಿಸಲು ನಾನು ಬದ್ಧಳಾಗಿದ್ದೇನೆ ಎಂದರೆ ಸರಿಯಲ್ಲ.

ESI.A.No.111/2022
AW-1,

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್‌ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.